


ಎಡದಿಂದ ಬಲಕ್ಕೆ :

1. ಬಾಧೆಯನ್ನೆಲ್ಲ ಎದುರಿಸಿ ಸಹಿಸಿಯೇ ಅವನು ಪಡೆದದ್ದು ಈ ಏಳ್ಗೆ (4)
3. ಪರಿತಪಿಸದೆ ಮುನ್ನುಗ್ಗಲು ಪರಾಕ್ರಮವೇ ಬೇಕು (3)
4. ಜನುಮ ನೀಡಿದಾಕೆ ಪೂಜ್ಯ ಮಾತೆ (3)
6. ಅವರಿವರಿಂದ ಪಡೆದು ತಂದದ್ದು ಈ ತಾವರೆ (3)
7. ಯಮನ ಕೆಲಸಗಳನ್ನೂ ನಿಯಂತ್ರಿಸುವವನು ಆತನೇ (4)
9. ಎಷ್ಟು ದಾನ ಪಡೆದರೂ ತಣಿಯದಂಥ ದುಡ್ಡಿನ ಬಾಯಾರಿಕೆ (4)
12. ಬುದ್ಧನಂತಲ್ಲದಿದ್ದರೂ ಧೀ ಶಕ್ತಿ ಹೊಂದಿದಾತ (4)
14. ವಿದ್ಯಾದಾನಕ್ಕೆ ನೆರವು ನೀಡದೆ ಹಿಂದುಮುಂದಾದ ಮಂತ್ರಿ (3)
15. ಸವಾರನಿಗೆ ಸಿಕ್ಕಿದ್ದೆಲ್ಲ ಪಿತ್ರಾರ್ಜಿತ ಹಕ್ಕು (3)
16. ನಗರದಲ್ಲಿಡೀ ಪ್ರಸಿದ್ಧ ಆ ಹಾಸ್ಯದ ಮಾತಿನವ (4)

ಮೇಲಿಂದ ಕೆಳಕ್ಕೆ:

1. ಭಾರೀ ಅಪವ್ಯಯ ಮಾಡಿದನೆಂದು ದೂರು ಬಂದಿದೆ (4)
2. ಮೇಜವಾನಿಗೆ ವ್ಯವಸ್ಥೆ ಮಾಡಿದಾಕೆಯೇ ಮುಖ್ಯಸ್ಥೆ (4)
3. ಪರಿಚಿತರ ಬಗೆಗೆ ಸದಾ ಸುದ್ದಿ ಹರಡುವ ಕೆಲಸ (3)
5. ಮಾನಿನಿಯರ ರಕ್ಷಣೆಗೆ ಭದ್ರ ಕಾನೂನು (3)
6. ದುಷ್ಟರನ್ನು ಹಿಡಿವ ತಂತ್ರಗಳಲ್ಲಿ ಎಂಟು ಬಗೆ (4)
8. ಕಲ್ಮಶ ಭರಿತ ಹಾಗಾಗಿ ಕಳಂಕಿತ (4)
10. ನ್ಯಾಯವನ್ನು ಕಾಣಬಲ್ಲದೇನು ಕಣ್ಣು ? (3)
11. ಹಬ್ಬದ ಜೊತೆಗೆ ವಿಷ್ಣುವಿನ ವಾಸರಗಳು ಏಕಾದಶಿ, ದ್ವಾದಶಿ (4)
12. ಇದು ಸೂರ್ಯನ ಅತಿ ನಿಕಟ ಗ್ರಹದ ದಿನ (4)
13. ವಾದ್ಯ ವಾದನ ವಿದ್ಯೆ ಕಲಿಸಿದವರಿಗೆ ನಮಸ್ಕರಿಸು (3)

### 07-09-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ಸಂತಸ ; 3. ವಿರಾಗ 4. ವಿಹಾರ 6. ಶುಭೋದಯ 7. ವಿತರಕ 9. ಕಲಾಕಾರ 11. ಸಂಪ್ರದಾಯ 15. ರಮೇಶ 16. ರುಧಿರ 17. ಯಮಳ

ಮೇಲಿಂದ ಕೆಳಕ್ಕೆ :

1. ಸಂಗಡ ; 2. ಸವಿತ ; 3. ವಿಷಾದ ; 5. ರಜತ 6. ಶುನಕ 8. ಕಡಾಯ ; 10. ಕಾತುರ 12. ಪ್ರಹಾರ 13. ಆಶಯ ; 14. ಮರುಳ

## ಪಫರ್ ಮೀನು: ವಿಶೇಷ ಏನು?

ಮತ್ಸ್ಯ ವರ್ಗದಲ್ಲಿಸುಮಾರು ಹತ್ತು ಸಾವಿರ ಪ್ರಭೇದಗಳಿವೆ; ಗಾತ್ರದಲ್ಲಿ, ರೂಪ ವೈಚಿತ್ರ್ಯದಲ್ಲಿ (ಚಿತ್ರ1), ಬೇಟೆ ಸಾಮರ್ಥ್ಯದಲ್ಲಿ (ಚಿತ್ರ3), ..... ಹಾಗೆಲ್ಲ ಮತ್ಸ್ಯ ವೈಶಿಷ್ಟ್ಯಗಳಲ್ಲಿ ಹೇರಳ ವೈವಿಧ್ಯ ಇದೆ. ಅವುಗಳಲ್ಲೆಲ್ಲ ಅತ್ಯಂತ ವಿಸ್ಮಯದ ಒಂದು ವಿಶಿಷ್ಟ ಮೀನು 'ಪಫರ್' (ಚಿತ್ರ 1). ಮತ್ಸ್ಯ ವರ್ಗದ, ಟೆಟ್ರಡೋಡಾಂಟಿಡೇ ಕುಟುಂಬದ, ಇಪ್ಪತ್ತೊಂಬತ್ತು ವಂಶಗಳ ಈ ಮೀನುಗಳಲ್ಲಿ ಒಟ್ಟು 191 ಪ್ರಭೇದಗಳಿವೆ.




ಪಫರ್ ಮೀನಿನ ಮೊದಲ ವಿಶೇಷ ಅದರ ಹೆಸರಿನಲ್ಲೇ ಇದೆ : 'ಶತ್ರು ಎದುರಾದೊಡನೆ, ಯಾವುದೇ ಅಪಾಯ ಒದಗಿದೊಡನೆ ಬಲೂನಿನಂತೆ ಉಬ್ಬುವ ಅದರ ಸ್ವಭಾವ ಸಾಮರ್ಥ್ಯ'. ಸಾಮಾನ್ಯ ಗಾತ್ರದ ಈ ಮೀನು ಬೇಟೆಗಾರರು ಎದುರಾದೊಡನೆ, ಕ್ಷಣಾರ್ಧದಲ್ಲೇ ಗಾಳಿಯನ್ನೋ, ನೀರನ್ನೋ ಹೀರಿಕೊಂಡು, ಭಾರೀ ಬಲೂನಿನಂತೆ ಉಬ್ಬಿ ಚೆಂಡಿನಂತೆ ಗುಂಡಾಗುತ್ತದೆ (ಚಿತ್ರ1) ! ಇದ್ದಕ್ಕಿದ್ದಂತೆ ಬದಲಾದ ಅದರ ಆಕಾರಗಾತ್ರಗಳನ್ನು ಕಂಡ "ಅದೃಷ್ಟವಂತ" ಬೇಟೆಗಾರರು ಸುಮ್ಮನೆ ಸದ್ದಿಲ್ಲದೆ ಹಿಮ್ಮೆಟ್ಟುತ್ತವೆ. ಅವು ಅದೃಷ್ಟವಂತರು ಏಕೆಂದರೆ ಪಫರ್ ಗೆ ಕಾಣದಂತೆ ಬಂದು ಬಾಯಿ ಹಾಕುವ ಶತ್ರುಗಳ ಬಾಯೊಳಗೇ ಪಫರ್ ಉಬ್ಬುತ್ತದೆ; ಗಂಟಲಲ್ಲಿ ತುರುಕಿದಂತೆ ನಿಂತು ಉಸಿರು ಕಟ್ಟಿಸುತ್ತದೆ; ಬಲಿಯೊಡನೆ ಬೇಟೆಗಾರನೂ ಸಾಯುತ್ತದೆ.

ಹಾಗಾಗದೆ ಪಫರ್ ಅನ್ನು ಹಿಡಿದು ನುಂಗುವ ಬೇಟೆಗಾರ ಭಾರೀ ದುರದೃಷ್ಟವಂತನಾಗುತ್ತದೆ ; ಪ್ರಾಣವನ್ನೇಕಳೆದುಕೊಳ್ಳುತ್ತದೆ. ಏಕೆಂದರೆ ಪಫರ್ ನ ಶರೀರದಲ್ಲಿ, ವಿಶೇಷವಾಗಿ ಅದರ ಪಿತ್ತಜನಕಾಂಗ, ಕರುಳು ಮತ್ತು ಚರ್ಮದಲ್ಲೂ ಕೂಡ ಅತಿ ಘೋರ ವಿಷವೊಂದು ತುಂಬಿಕೊಂಡಿದೆ. 'ಟೆಟ್ರಾಡೋಟಾಕ್ಸಿನ್' ಎಂಬ ಆ ವಿಷ ( ನಾಗರ ಹಾವಿನ ವಿಷದಂತೆ ) ಒಂದು ನ್ಯೂರೋಟಾಕ್ಸಿನ್ ಆಗಿದೆ. ಹಾಗಾಗಿ ಪಫರ್ ಅನ್ನು ತಿಂದ ಪ್ರಾಣಿಗಳ ಮನುಷ್ಯರದೂ ಕೂಡ ನರಮಂಡಲ ಕ್ಷಿಪ್ರವಾಗಿ ಹಾನಿಗೊಂಡು, ಪಾರ್ಶ್ವ ವಾಯು ಬಡಿದು, ಉಸಿರಾಟ ನಿಂತು, ಹೃದಯ ಸ್ತಂಭನವಾಗಿ ಪ್ರಾಣ ಹೋಗುತ್ತದೆ. ಶಾರ್ಕ್ ಗಳಂತಹ ಭಾರೀ ಶರೀರದ ಬೇಟೆಗಾರರು ಮಾತ್ರ ಈ ವಿಷವನ್ನು ಸಹಿಸಬಲ್ಲವು.

ವಿಸ್ಮಯ ಏನೆಂದರೆ ಎಷ್ಟೇ ವಿಷಕರವಾಗಿದ್ದರೂ, ಅಪಾಯಕರವಾಗಿದ್ದರೂ ಪಫರ್ ಅನ್ನು ತಿನ್ನುವ ಹುಚ್ಚು ಬಯಕೆಯ ಜನ ವಿಶೇಷವಾಗಿ ಜಪಾನ್ ದೇಶದಲ್ಲಿ ಭಾರೀ ಸಂಖ್ಯೆಯಲ್ಲಿದ್ದಾರೆ. ಪಫರ್ ನ ವಿಷದ ಭಾಗಗಳನ್ನು ತೆಗೆದು, ನಿಪುಣ ಬಾಣಸಿಗರು ತಯಾರಿಸುವ ಭಾರೀ ಬೆಲೆಯ 'ಫ್ಯೂಗೂ' ಖಾದ್ಯವನ್ನು ಪಫರ್ ನ ವಿಷದ ಲಘು ಪರಿಣಾಮಗಳ ವಿಲಕ್ಷಣ ರೋಮಾಂಚನಕ್ಕೆಂದೇ ಸೇವಿಸುವ ಜನ ಅಲ್ಲಿ ಬಹಳ ಸಂಖ್ಯೆಯಲ್ಲಿ ಇದ್ದಾರೆ ! ಫ್ಯೂಗೂ ವನ್ನು ಸೇವಿಸಿ ಪಾರ್ಶ್ವವಾಯುವಿಗೆ ತುತ್ತಾದ, ಕೋಮಾ ಸ್ಥಿತಿ ತಲುಪಿದ ಮತ್ತು ಪ್ರಾಣವನ್ನೂ ಬಿಟ್ಟವರ ಅಪರೂಪದ ದಾಖಲೆಗಳೂ ಇವೆ !

■ ಎನ್. ವಾಸುದೇವ್